ಮಾಡುತ್ತಿದ್ದ ಕಟ್ಟಡದ ಕೆಳ ಅಂತಸ್ತಿನಲ್ಲೇ ಒಂದು ಕಡೆ ಉಳಕೊಳ್ಳೀನಿ ಅಂದ. ಪೋತರಾಜು, ಚಿಟ್ಟಿಬಾಬು ಮತ್ತು ವೆಂಕಟಗಿರಿ ಜತೆ ಚೌಲ್ಟ್ರಿಯಲ್ಲೇ ಉಳಿಯಲು ತೀರ್ಮಾನಿಸಿದರು. ಓನರ್ ಮನೆಯವರು ರೇಣಿಗುಂಟಕ್ಕೆ ಹೋದ ಮೇಲೆ ಎಲ್ಲರೂ ಅಲ್ಲಿಗೇ ಶಿಫ್ಟ್ ಆಗುವುದೆಂದು ತೀರ್ಮಾನವಾಯಿತು. ಈ ಮಾಹಿತಿಯನ್ನು ವೆಂಕಟಗಿರಿ, ಪೆದ್ದಾಯನನಿಗೆ ಫೋನ್ ಮಾಡಿ ತಿಳಿಸಿದ.

ನೀವು ಅಲ್ಲಿರೋದು, ಮನೆ ಮಾಡಿರೋದು ಎಲ್ಲಾ ಕೊಂಡಯ್ಯನಿಗೆ ಗೊತ್ತಾಗಿದೆ. ಇನ್ನು ನೀವು ಸಿಟಿಯಲ್ಲಿ ಓಡಾಡಿ ಅವನನ್ನು ಹುಡುಕೋದು ಬೇಡ. ಅವನೇ ನಿಮ್ಮನ್ನು ಬಂದು ಕಾಣ್ತಾನೆ. ಯಾವಾಗ ಬರ್ತಾನೆ ಅನ್ನೋದು ಗೊತ್ತಿಲ್ಲ. ಮುಂದಿನ ವಾರ ಇಲ್ಲಿಂದ ಬಾಲಗೋವಿಂದ ಅನ್ನೋ ಹುಡುಗ ಬರ್ತಾನೆ. ಅವನಿಗೆ ಡ್ರೈವಿಂಗ್ ಗೊತ್ತಿದೆ. ಅಲ್ಲಿ ಯಾವುದಾದರೂ ಆಟೊ ಓಡಿಸಿಕೊಂಡು ಇರೋಕೆ ವ್ಯವಸ್ಥೆ ಮಾಡಿದ್ದೀನಿ. ಅವನ ಕೈಯಲ್ಲಿ ಐವತ್ತು ಸಾವಿರ ರೂಪಾಯಿ ಕಳಿಸಿಕೊಡ್ತೀನಿ. ಮನೆ ಬಾಡಿಗೆ, ದಿನಸಿ ಖರ್ಚಿಗೆ. ಅವನೇ ನಿನಗೆ ತಂದುಕೊಡ್ತಾನೆ. ನೀವೆಲ್ಲ ಅಲ್ಲಿ ಯಾವುದಾದರೂ ಕೆಲಸ ಮಾಡ್ತಾ ಇರಬೇಕು ಅಂತ ಪೆದ್ದಾಯನ ಹೇಳಿದ ಮೇಲೆ ವೆಂಕಟಗಿರಿ ಆತಂಕ ಹೆಚ್ಚಾಯಿತು. ನಮ್ಮನ್ನು ಯಾವುದೋ ದೊಡ್ಡ ಸಂಚಿನ ಕೆಲಸಕ್ಕೆ ಇಲ್ಲಿಗೆ ಕಳಿಸಿರಬಹುದೇ ಅನ್ನಿಸಲು ಶುರುವಾಯಿತು.

ಸಾಯಿಲಕ್ಷ್ಮಿ, ಎರ್ರಿತಾತ ಕಾಲೋನಿಯ ಮೂರು ಮನೆಗಳಲ್ಲಿ ಕಸ, ಮುಸುರೆ ಕೆಲಸ ಹುಡುಕಿಕೊಂಡಳು. ಮುತ್ಯಾಲ ಎಲ್ಲೂ ಕೆಲಸಕ್ಕೆ ಹೋಗದೆ ಮೂರೂ ಹೊತ್ತು ಮನೆಯಲ್ಲೇ ಕಳೆಯ ತೊಡಗಿದ. ಲಕ್ಷ್ಮಿಯ ಜತೆ ಮನಸ್ಸು ಬಿಚ್ಚಿ ಮಾತಾಡಲು ವೆಂಕಟಗಿರಿಗೆ ಸಾಧ್ಯವಾಗಲಿಲ್ಲ. ಅವಳು ಸದಾ ಏನನ್ನೋ ಯೋಚಿಸುತ್ತಿರುವಂತೆ ಕಾಣಿಸುತ್ತಿದ್ದಳು. ಅವಳ ಜತೆ ಎಲ್ಲಿಗಾದರೂ ಹೋಗುವುದು ಸಾಧ್ಯವಿಲ್ಲ ಎನ್ನುವುದು ವೆಂಕಟಗಿರಿ ಸ್ಪಷ್ಟವಾಯಿತು.

★★★

ಇಂಕಾ ರೊಂಡು ವಾರಂ ಮೀರು ಇಕ್ಕಡಉಂಡೇದೆ ಕ್ಷೇಮಂ... ಎನ್ನುತ್ತ ಕೇಶವರೆಡ್ಡಿ, ಅಯ್ಯಗಾರು ಮಲಗಿದ್ದ ಮಂಚದ ಒಂದು ಮಗ್ಗುಲಲ್ಲಿ ಕೂರುತ್ತ ಅವರ ಮುಖ ನೋಡಿದ.

ಅಯ್ಯನ ಮುಖದಲ್ಲಿ ಆತಂಕ ಎದ್ದು ಕಾಣುತ್ತಿತ್ತು. ಅವರ ಬಲಗೈಯನ್ನು ರೆಡ್ಡಿ ತನ್ನ ಎರಡೂ ಕೈಗಳಿಂದ ಹಗುರವಾಗಿ ಎತ್ತಿಕೊಂಡು ಕೆಲ ಕ್ಷಣ ಹಾಗೇ ಹಿಡಿದುಕೊಂಡಿದ್ದು ನಂತರ ಮೆಲ್ಲಗೆ ಸವರುತ್ತ ಡಾಕ್ಟರು ಇನ್ನೂ ಕೆಲವು ದಿನ ಇಲ್ಲೇ ಇರಬೇಕು ಅಂದಿದ್ದಾರೆ... ದೊಡ್ಡ ಡಾಕ್ಟರ ಜತೆ ಈಗಷ್ಟೇ ಮಾತಾಡಿ ಬಂದೆ. ನೀವು ಚಿಂತೆ ಮಾಡೋದು ಬೇಡ. ಅಷ್ಟೊತ್ತಿಗೆ ಎಲ್ಲ ವ್ಯವಸ್ಥೆ ಆಗುತ್ತೆ. ನಮ್ಮ ಯೂನಿಯನ್ನಿನ ಮೆಂಬರುಗಳು ತಿರುಪತಿಗೆ ಯಾತ್ರೆ ಹೊರಟಿದ್ದಾರೆ. ಎಲ್ಲರೂ ಕಾಟನ್ ಮಿಲ್ ಕಾರ್ಮಿಕರು. ಅವರ ಜತೆ ನಿಮ್ಮನ್ನೂ ಕಳಿಸಿಕೊಡುತ್ತೇನೆ. ನಿಮ್ಮ ಪಾರ್ಸಲ್ ಬಂದು ತಲುಪಿದೆ. ನಂಗೆ ಪರಿಚಯ ಇರುವ ಒಬ್ಬರ ಗೋಡೌನ್‌ನಲ್ಲಿ ಇರಿಸಿದ್ದೀನಿ. ಅನುಕೂಲ ಆದಾಗ ನಾನೇ ಅದನ್ನು ಕಡಪಾಕ್ಕೆ ತಲುಪಿಸ್ತೀನಿ, ನೀವು ಚಿಂತೆ ಮಾಡಬೇಡಿ...

ಇಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ. ಪೊಲೀಸರಿಗೆ ಯಾರ ಮೇಲೊ ಅನುಮಾನ ಬಂದಿರೊ ಹಾಗೆ ಕಾಣುತ್ತೆ. ಸಿಟಿಯಲ್ಲಿ ಅವರ ಓಡಾಟ ಜಾಸ್ತಿಯಾಗಿದೆ. ಕಾರಣ ಗೊತ್ತಿಲ್ಲ. ನೀವು ಇಲ್ಲಿಗೆ ಬಂದಿರೋದು, ಈ ಆಸ್ಪತ್ರೆಯಲ್ಲಿ ಮಲಗಿರೋದು ಮಾತ್ರ ಯಾರಿಗೂ ಗೊತ್ತಿಲ್ಲ. ಗೊತ್ತಾಗೋದೂ ಇಲ್ಲ. ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ನಿಮ್ಮನ್ನು ಇಲ್ಲೇ ಶ್ರೀದೇವಿ ನಗರ ಅಂತ ಇದೆ. ಅಲ್ಲಿ ನಮ್ಮವರದೇ ಒಂದು ಮನೆಗೆ ಕರಕೊಂಡು ಹೋಗ್ತೀನಿ. ಎಲ್ಲ ಅನುಕೂಲಗಳಿವೆ. ಕೆಲವು ದಿನ ಅಲ್ಲಿ ರೆಸ್ಟ್ ಮಾಡಿ. ಯುಗಾದಿ ಮುಗಿದ ಮೇಲೆ ತಿರುಪತಿಗೆ ಯಾತ್ರೆ ಹೊರಟವರ ಜತೆ ನಿಮ್ಮನ್ನು ಕಳಿಸಿಕೊಡುತ್ತೇನೆ. ಯಾರಿಗೂ ಅನುಮಾನ ಬರದ ಹಾಗೆ ನಿಮ್ಮನ್ನು ನಮ್ಮ ಬಾರ್ಡರ್ ದಾಟಿಸ್ತೀನಿ. ನೀವು ಎಲ್ಲಿ ಇಳಿಯಬೇಕು. ಅಲ್ಲಿಂದ ಎಲ್ಲಿಗೆ ಹೋಗಬೇಕು ಅನ್ನೋದನ್ನು ಪೆದ್ದಾಯನ ನೋಡಿಕೊಳ್ತಾರೆ ಅಂತ ಹೇಳಿದ ಮೇಲೆ